1. 'ಶ್ರೀಮದ್ ಭಗವದ್ಗೀತಾ ತಾತ್ಪರ್ಯ' ಅಥವಾ 'ಜೀವನಧರ್ಮಯೋಗ'– ಈ ಕೃತಿಯ ಕರ್ತೃ
   A) ಪಂಜೆಮಂಗೇಶರಾವ್ B) ಜಯರಾಮಾಚಾರ್ಯ
   C) ಡಿ.ವಿ.ಗುಂಡಪ್ಪ D) ಎಸ್.ಜಿ.ನರಸಿಂಹಾಚಾರ್

2. 'ಪ್ರಾಸವನೀಗಲೆ ತೊರೆದು ಬಿಡುವುದೇ ನಿಶ್ಚಯಂ' ಎಂದು ಹೇಳಿ ಪ್ರಾಸತ್ಯಾಗ ಮಾಡಿದ ಕವಿ ಯಾರು?
   A) ಶಾಂತಕವಿ B) ಎಂ.ಗೋವಿಂದಪೈ
   C) ಬಿ.ಎಂ.ಶ್ರೀ D) ಹಟ್ಟಿಯಂಗಡಿ ನಾರಾಯಣರಾಯರು

3. ಬೋಳಾರ ಬಾಬುರಾಯರ ಕಾದಂಬರಿ ಇದು.
   A) ವಾಗ್ದೇವಿ B) ಇಂದಿರಾ
   C) ರಮಾಮಾಧವ D) ಉನ್ಮಾದಿನಿ

4. 'ಮತ್ತೆ ಮತ್ತೆ ಯುಗಾದಿ'– ಈ ಕವಿತೆಯ ಕರ್ತೃ
   A) ಬಿ.ಸಿ.ರಾಮಚಂದ್ರಶರ್ಮ B) ಎಚ್.ಎಂ.ಚನ್ನಯ್ಯ
   C) ಸುಮತೀಂದ್ರ ನಾಡಿಗ D) ಗೋಪಾಲಕೃಷ್ಣ ಅಡಿಗ

5. ಟಿ.ಪಿ.ಕೈಲಾಸಂ ಅವರ ನಾಟಕ ಇದು.
   A) ಮೂಕಬಲಿ B) ಶೋಕಚಕ್ರ
   C) ಬಹಿಷ್ಕಾರ D) ಕವಿಭಿಕ್ಷೆ

6. ಮೋಲಿಯೆರ್‌ನ 'ತಾರ್ತೂಪ್' ನಾಟಕದ ಅನುವಾದ ಇದು.
   A) ಶೂರಸೇನಚರಿತ್ರೆ B) ಆಷಾಢಭೂತಿ
   C) ಸೂತ್ರದಗೊಂಬೆ D) ಅಶ್ವತ್ಥಾಮನ್

7. 'ಭಾವ' ಇದು ಯಾರ ಆತ್ಮಕಥನ?
   A) ಮಾಸ್ತಿವೆಂಕಟೇಶ ಅಯ್ಯಂಗಾರ್ B) ಶಿವರಾಮಕಾರಂತ
   C) ಪು.ತಿ.ನರಸಿಂಹಾಚಾರ್ D) ಯು.ಆರ್.ಅನಂತಮೂರ್ತಿ

8. 'ಗೋಪಾಲಯ್ಯ'ನ ಪಾತ್ರ ಚಿತ್ರಣವನ್ನು ಒಳಗೊಂಡಿರುವ ಕಾದಂಬರಿ ಇದು.
   A) ಅಳಿದಮೇಲೆ B) ಸರಸಮ್ಮನ ಸಮಾಧಿ
   C) ಬೆಟ್ಟದಜೀವ D) ಮರಳಿಮಣ್ಣಿಗೆ

9. 'ಚಿತ್ರಾಂಗದ' ಕಾವ್ಯ ಎಷ್ಟು ಪರ್ವಗಳಿಂದ ಕೂಡಿದೆ?
   A) ಎಂಟು B) ಆರು
   C) ಒಂಬತ್ತು D) ಐದು

10. "ಕಡೆಗೀಲಿಲ್ಲದ ಬಂಡಿ ಹೊಡೆಗೆಡೆಯದೆ ಮಾಣ್ಬುದೆ
ಕಡೆಗೀಲು ಬಂಡಿಗಾಧಾರ................." ಈ ವಚನದ ಕರ್ತೃ

A) ಬಸವಣ್ಣ B) ಸಿದ್ಧರಾಮ
C) ಚನ್ನಬಸವಣ್ಣ D) ದೇವರದಾಸಿಮಯ್ಯ

11. ಚಾಮರಸನ 'ಪ್ರಭುಲಿಂಗಲೀಲೆ' ಯಾವ ಛಂದಸ್ಸಿನಲ್ಲಿ ರಚಿತವಾಗಿದೆ.

A) ಭಾಮಿನೀ ಷಟ್ಪದಿ B) ವಾರ್ಧಕ ಷಟ್ಪದಿ
C) ಭೋಗಷಟ್ಪದಿ D) ಕುಸುಮ ಷಟ್ಪದಿ

12. 'ಸೀತಾ ಪರಿತ್ಯಾಗ' ಕಥೆ ಬರುವ ಕೃತಿ

A) ರಾಮನಾಥ ಚರಿತ್ರ B) ತುರಂಗಭಾರತ
C)ಜೈಮಿನಿಭಾರತ D) ರಾಮಧಾನ್ಯಚರಿತೆ

13. 'ಗಿರಿಜಾ ಕಂಡ ಸಿನಿಮಾ'– ಈ ಕತೆಯ ಲೇಖಕರು

A) ತ.ರಾ.ಸು B) ಚದುರಂಗ
C) ನಿರಂಜನ D) ಬಸವರಾಜಕಟ್ಟೀಮನಿ

14. 'ಅಂಬಿಕಾತನಯದತ್ತ' ಇದು ಯಾರ ಕಾವ್ಯನಾಮ?

A) ಬೆಟಗೇರಿ ಕೃಷ್ಣಶರ್ಮ B) ಬೆನಗಲ್ ರಾಮರಾವ್
C) ದ.ರಾ.ಬೇಂದ್ರೆ D) ಬಾಳಾಚಾರ್ಯ ಸಕ್ಕರಿ

15. 'ಅಲೆಯುವ ಮನ'– ಈ ಕೃತಿಯ ಕರ್ತೃ

A) ರಾವ್‌ಬಹದ್ದೂರ್ B) ಎ.ಎನ್.ಮೂರ್ತಿರಾವ್
C) ಗೊರೂರು ರಾಮಸ್ವಾಮಿ ಅಯ್ಯಂಗಾರ್ D) ಎನ್.ಪ್ರಹ್ಲಾದರಾವ್

16. ಸರಿಯಾದುದನ್ನು ಗುರುತಿಸಿ:

A) ಗಂಗಾವತರಣ–ನಿಸಾರ್ ಅಹಮ್ಮದ್ B) ನನ್ನನಲ್ಲ– ಜಿ.ಪಿ.ರಾಜರತ್ನಂ
C) ಪತ್ರಪುಷ್ಪ– ಕಡಂಗೊಡ್ಲು ಶಂಕರಭಟ್ಟ D) ಕಲಾಸುಂದರಿ–ವೈದೇಹಿ

17. 'ಕೂಡಲಸಂಗಮದೇವಾ' ಇದು ಯಾರ ವಚನಗಳ ಅಂಕಿತನಾಮ?

A) ಬಸವಣ್ಣ B) ಅಕ್ಕಮಹಾದೇವಿ
C) ಅಲ್ಲಮಪ್ರಭು D) ಚೆನ್ನಬಸವಣ್ಣ

18. 'ಶರಪಂಜರ' ಇದು ಯಾರ ಕಾದಂಬರಿ?

A) ವಾಣಿ B) ಎಂ.ಕೆ.ಇಂದಿರಾ
C) ತ್ರಿವೇಣಿ D) ಅನುಪಮನಿರಂಜನ

19. ಚಂದ್ರಶೇಖರ ಕಂಬಾರರ 'ಸಿರಿಸಂಪಿಗೆ' ನಾಟಕದ ನಾಯಕ

A) ಶಿವನಾಗದೇವ B) ಕುಮಾರಸ್ವಾಮಿ

C) ಸಿದ್ಧನಾಯಕ D) ಬಾಳ

20. 'ಚಿತ್ರದುರ್ಗದ ಇತಿಹಾಸ' ಈ ಕಾದಂಬರಿಗೆ ವಸ್ತುವಾದ ಕೃತಿ.

A) ಚನ್ನಬಸವನಾಯಕ B) ಕಂಬನಿಯ ಕುಯಿಲು

C) ಮಯೂರ D) ಶಾಂತಲಾ

21. ನಿರಂಜನರ ಯಾವ ಕಾದಂಬರಿ ಸ್ವಾತಂತ್ರ್ಯಕ್ಕಾಗಿ ಹೋರಾಡಿ ಮಡಿದ ವೀರನ ಕಥೆಯನ್ನು ಚಿತ್ರಿಸಿಕೊಡುತ್ತದೆ?

A) ಚಿರಸ್ಮರಣೆ B) ಮೃತ್ಯುಂಜಯ

C) ರಂಗಮ್ಮನ ವಠಾರ D) ಕಲ್ಯಾಣಸ್ವಾಮಿ

22. ಕರ್ಣಪರ್ವದ ಹತ್ತೊಂಬತ್ತನೆಯ ಸಂಧಿಯಲ್ಲಿ ಬರುವ ಪ್ರಮುಖ ಪ್ರಸಂಗ ಇದು.

A) ಶಲ್ಯ ಕರ್ಣನ ಸಾರಥಿಯಾದದ್ದು B) ಭೀಮ ದುಶ್ಶಾಸನನ್ನು ಕೊಂದದ್ದು

C) ವೀರವೃಷಸೇನ ಹೋರಾಡಿ ಮಡಿದದ್ದು D) ಕರ್ಣಾರ್ಜುನರ ಸಂಗ್ರಾಮ

23. ಹರಿಹರನ 'ಬಸವರಾಜದೇವರ ರಗಳೆ' ಕಾವ್ಯದ ನಾಯಕ

A) ಚೆನ್ನಬಸವಣ್ಣ B) ಸಿದ್ಧರಾಮ

C) ಬಸವಣ್ಣ D) ಬಿಜ್ಜಳ

24. 'ಯೋಗ–ಭೋಗಗಳ' ಸಮನ್ವಯದ ಚಿತ್ರಣವನ್ನು ಒಳಗೊಂಡಿರುವ ಕೃತಿ ಇದು.

A) ಬಸವಪುರಾಣ B) ಭರತೇಶವೈಭವ

C) ತೊರವೆ ರಾಮಾಯಣ D) ಗಿರಿಜಾಕಲ್ಯಾಣ

25. ಇವರು ಷಟ್ಪದಿಯಲ್ಲಿ ಕೃತಿಗಳನ್ನು ರಚಿಸಿದವರು

A) ಕುಮಾರವಾಲ್ಮೀಕಿ–ಲಕ್ಷ್ಮೀಶ–ವಿರೂಪಾಕ್ಷ B) ಲಕ್ಷ್ಮೀಶ–ರತ್ನಾಕರವರ್ಣಿ–ಕೆಂಪುನಾರಾಯಣ

C) ರಾಘವಾಂಕ–ನಂಜುಂಡ–ಮುದ್ದಣ D) ಹರಿಹರ–ಕುಮಾರವ್ಯಾಸ–ಸರ್ವಜ್ಞ

26. 'ಮೋಹನ ತರಂಗಿಣಿ'– ಈ ಕೃತಿಯ ಕರ್ತೃ

A) ಪುರಂದರದಾಸ B) ಗೋಪಾಲದಾಸ

C) ಕನಕದಾಸ D) ಜಗನ್ನಾಥದಾಸ

27. ಸಿದ್ಧಲಿಂಗಯ್ಯನವರ ಸಮಗ್ರ ಕವಿತೆಗಳ ಸಂಕಲನ ಇದು.

A) ಭಾವತರಂಗ B) ಮಲ್ಲಿಗೆ ಮಾಲೆ

C) ಅರಳು–ಮರಳು D) ಮೆರವಣಿಗೆ

28. "ಪುರದ ಪುಣ್ಯಂ ಪುರುಷ ರೂಪಿಂದೆ ಪೋಗುತಿದೆ
ಪರಿಜನದಭಾಗ್ಯವಡವಿಗೆ ನಡೆಯುತ್ತಿದೆ....." ಈ ಪದ್ಯ ಸಾಲುಗಳು ಬರುವ ಕೃತಿ

A) ಸಿದ್ಧರಾಮಪುರಾಣ  B) ಹರಿಶ್ಚಂದ್ರಕಾವ್ಯ
C) ಸೋಮನಾಥ ಚರಿತೆ  D) ವೀರೇಶ್ವರಚರಿತೆ

29. "ಉದರ ವೈರಾಗ್ಯವಿದು ನಮ್ಮ
ಪದುಮನಾಭನಲ್ಲಿ ಲೇಶ ಭಕುತಿ ಇಲ್ಲ"– ಈ ಕೀರ್ತನೆಯ ಕರ್ತೃ

A) ವಿಜಯದಾಸ  B) ಮಹೀಪತಿದಾಸ
C) ನರಹರಿತೀರ್ಥ  D) ಪುರಂದರದಾಸ

30. "ಪದ್ಯಂ ವದ್ಯಂ ಗದ್ಯಂ ಹೃದ್ಯಂ" ಎಂಬುದಾಗಿ ಹೇಳಿರುವ ಕವಿ.

A) ಮುದ್ದಣ  B) ಚಾಟುವಿಠ್ಠಲನಾಥ
C) ಚಿಕದೇವರಾಯ  D) ನಿಜಗುಣಶಿವಯೋಗಿ

31. 'ಚೆನ್ನಬಸವಪುರಾಣ' ಕೃತಿಯ ಕರ್ತೃ

A) ಸಿದ್ಧಲಿಂಗಯತಿ  B) ವಿರೂಪಾಕ್ಷ
C) ಕೆರೆಯ ಪದ್ಮರಸ  D) ಕೆಂಪು ನಾರಾಯಣ

32. ಇವುಗಳಲ್ಲಿ ಸರಿಯಾದ ಉತ್ತರ ಯಾವುದು?

A) ನಾಕುತಂತಿ–ಶಿವರಾಮಕಾರಂತ  B) ಮೂಕಜ್ಜಿಯ ಕನಸುಗಳು–ದ.ರಾ.ಬೇಂದ್ರೆ
C) ಭಾರತಸಿಂಧುರಶ್ಮಿ–ವಿ.ಕೃ.ಗೋಕಾಕ್  D) ಚಿಕವೀರರಾಜೇಂದ್ರ–ಗಿರೀಶ್‌ಕಾರ್ನಾಡ್

33. ಕೆ.ಎಸ್.ನರಸಿಂಹಸ್ವಾಮಿ ಅವರ ಯಾವ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ?

A) ಮೈಸೂರುಮಲ್ಲಿಗೆ  B) ತೆರದಬಾಗಿಲು
C) ಶಿಲಾಲತೆ  D) ದೀಪದಮಲ್ಲಿ

34. "ನಡೆವುದೊಂದೆ ಭೂಮಿ ಕುಡಿವುದೊಂದೇ ನೀರು
ಸುಡುವಗ್ನಿಯೊಂದೆ ಇರುತಿರಲು........................
ನಡುವೆ ಎತ್ತಣದು? ಸರ್ವಜ್ಞ" ಬಿಟ್ಟಿರುವ ಜಾಗಕ್ಕೆ ಯಾವ ಮಾತು ಸೂಕ್ತವಾದದ್ದಾಗಿದೆ?

A) ಮೂಲಮಂತ್ರ  B) ವಂಶಗೋತ್ರ
C) ಕುಲಗೋತ್ರ  D) ಸ್ವಗೋತ್ರ

35. "......ನೀಂ ಪಳಂಚಲೆದಪೆಯಣ್ಣ ಸೂಟ್ ಪಡೆಯಲಪ್ಪುದು ಕಾಣ ಮಹಾಜಿರಂಗದೊಳ್" ಈ ಮಾತನ್ನು ಯಾರು ಯಾರಿಗೆ ಹೇಳಿದರು?

A) ದುರ್ಯೋಧನ–ಕರ್ಣನಿಗೆ  B) ಕರ್ಣ–ಭೀಷ್ಮನಿಗೆ
C) ಭೀಷ್ಮ–ಕರ್ಣನಿಗೆ  D) ದ್ರೋಣ–ಕರ್ಣನಿಗೆ

36. ರನ್ನನಿಗೆ 'ಕವಿಚಕ್ರವರ್ತಿ' ಬಿರುದು ನೀಡಿದ ದೊರೆ.

A) ಮುಮ್ಮಡಿ ಕೃಷ್ಣ
B) ಇಮ್ಮಡಿ ತೈಲಪ
C) ಒಂದನೆಯ ತೈಲಪ
D) ಚಾಮುಂಡರಾಯ

37. 'ಛಂದೋಗತಿ' ಕೃತಿಯ ಕರ್ತೃ

A) ಗುಣಚಂದ್ರ
B) ಈಶ್ವರ
C) ಮೂರನೆಯ ನಾಗವರ್ಮ
D) ಸೇಡಿಯಾಪು ಕೃಷ್ಣಭಟ್ಟ

38. ನಾಗವರ್ಮನ 'ಕರ್ಣಾಟಕ ಕಾದಂಬರಿ'ಯ ಮೂಲ

A) ರವಿಷೇಣನ ಪಂಚತಂತ್ರ
B) ಗುಣಭದ್ರಾಚಾರ್ಯರ ಉತ್ತರಪುರಾಣ
C) ಕಾಳಿದಾಸನ ಕುಮಾರಸಂಭವ
D) ಬಾಣನ ಕಾದಂಬರಿ

39. "ಸಕ್ಕದದೊಳ್ ಮುನ್ನುಳ್ಳ ಕಾಳಿದಾಸಂಗಂ ನಾಲ್ವಡಿ ರಚನೆಯೊಳ್ ಕುರುಳ್ಗಳ ಸವಣಂ" ಎಂದು ಆತ್ಮಪ್ರಶಂಸೆ ಮಾಡಿಕೊಂಡಿರುವ ಕವಿ.

A) ಪಂಪ
B) ಪೊನ್ನ
C) ಚಾಮುಂಡರಾಯ
D) ಜನ್ನ

40. ಕರ್ನಾಟಕ ವಿಷಯ ಜಾತಿ ಛಂದಸ್ಸಿನಲ್ಲಿ ನಾಗವರ್ಮ ಸೇರಿಸಿ ಹೇಳದಿರುವ ಪ್ರಸಿದ್ಧವಾದ ಅಚ್ಚಗನ್ನಡ ಛಂದಸ್ಸು ಯಾವುದು?

A) ಸಾಂಗತ್ಯ
B) ತ್ರಿಪದಿ
C) ಚೌಪದಿ
D) ಏಳೆ

41. 'ಪಂಚತಂತ್ರ' ಕೃತಿ ಯಾವ ಪ್ರಕಾರಕ್ಕೆ ಸೇರಿದ್ದು?

A) ಷಟ್ಪದಿ
B) ರಗಳೆ
C) ಚಂಪೂ
D) ವಚನ

42. ಕಂದ ಪದ್ಯದಲ್ಲಿ ಬರುವ ನಾಲ್ಕು ಮಾತ್ರೆಗಳ ಗಣಗಳ ಒಟ್ಟು ಸಂಖ್ಯೆ

A) ಹದಿನಾರು
B) ಎಂಟು
C) ಹದಿಮೂರು
D) ಆರು

43. "ನೇಮಿಜನ್ನಮರಿರ್ವರೆ ಕರ್ಣಾಟಕೃತಿಗೆ ಸೀಮಾಪುರುಷರ್" ಎಂದು ಹೇಳಿರುವ ಕವಿ

A) ಕಮಲಭವ
B) ನಾಗರಾಜ
C) ಮಧುರ
D) ಹಸ್ತಿಮಲ್ಲ

44. ಗುರುಲಘು ಕಡೆಯಲಿ ಬರಲು ________ ಮಕ್ಕುಂ.

A) ಮನಗಣ
B) ಸತಗಣ
C) ಜರಗಣ
D) ಭಯಗಣ

45. ಉಪಲಬ್ಧವಿರುವ ಕನ್ನಡದ ಮೊತ್ತಮೊದಲ ಜೈನರಾಮಾಯಣ ಕೃತಿ ಇದು.

A) ರಾಮಚಂದ್ರಚರಿತಪುರಾಣ
B) ಭುವನೈಕರಾಮಾಭ್ಯುದಯ
C) ಶ್ರೀರಾಮ ಪಟ್ಟಾಭಿಷೇಕ
D) ಕುಮುದೇಂದು ರಾಮಾಯಣ

46. "ನಾಗವರ್ಮ ಅಂಶಷಟ್ಪದಿ ಲಕ್ಷಣವನ್ನು ಹೇಳಿದ್ದಾನೆ. ಆದರೆ ಮಾತ್ರಾಷಟ್ಪದಿಯ ಪ್ರಭೇದಗಳನ್ನು ಹೇಳಿಲ್ಲ" ಈ ಹೇಳಿಕೆ

A) ಸರಿ ಸರಿ
B) ತಪ್ಪು ತಪ್ಪು
C) ಸರಿ ತಪ್ಪು
D) ತಪ್ಪು ಸರಿ

47. ಹದಿನಾಲ್ಕು ಮಹಾಪುರುಷರ ಕಥೆಗಳನ್ನು ಹದಿನಾಲ್ಕು ಆಶ್ವಾಸಗಳಲ್ಲಿ ನಿರೂಪಿಸುವ ಜೈನಧಾರ್ಮಿಕ ಗ್ರಂಥ ಇದು.

A) ಧರ್ಮಾಮೃತ
B) ಕಬ್ಬಿಗರ ಕಾವ
C) ಚಂದ್ರಪ್ರಭಪುರಾಣ
D) ಸಮಯಪರೀಕ್ಷೆ

48. "......ಈ ಬೂತು ಎನ್ನ ಸರಂಗೇಳ್ದೊಡಲ್ಲದೆ ಪೋಱಮಡುವನಲ್ಲಂ ಇವಂಗಾನೆ ಸಾಲ್ವೆನ್....." ಎಂದು ಹೇಳಿ ಆರ್ಭಟಿಸಿದವನು.

A) ದುರ್ಯೋಧನ
B) ಧರ್ಮರಾಯ
C) ಭೀಮ
D) ಅರ್ಜುನ

49. ಜೀವದಯಾಷ್ಟಮಿಯ ದಿನದಂದು ಜೈನರು ಪಾರಾಯಣ ಮಾಡುವ ಕೃತಿ ಇದು.

A) ವರ್ಧಮಾನಪುರಾಣ
B) ಯಶೋಧರಚರಿತೆ
C) ಅಜಿತಪುರಾಣ
D) ಅರ್ಧನೇಮಿಪುರಾಣ

50. ಅನುಕ್ರಮದ ಮಾದರಿ : ಕಾಲಾನುಕ್ರಮದ ರೀತ್ಯಾ ಸಮರ್ಪಕವಾದದನ್ನು ಗುರುತಿಸಿ.

A) ತ್ರಿಷಷ್ಠಿಲಕ್ಷಣಮಹಾಪುರಾಣ, ಮಲ್ಲಿನಾಥಪುರಾಣ, ಲೀಲಾವತಿಪ್ರಬಂಧ, ಅನಂತನಾಥಪುರಾಣ
B) ಮಲ್ಲಿನಾಥಪುರಾಣ, ತ್ರಿಷಷ್ಠಿಲಕ್ಷಣಮಹಾಪುರಾಣ, ಅನಂತನಾಥಪುರಾಣ, ಲೀಲಾವತಿಪ್ರಬಂಧ
C) ತ್ರಿಷಷ್ಠಿಲಕ್ಷಣಮಹಾಪುರಾಣ, ಲೀಲಾವತಿಪ್ರಬಂಧ, ಅನಂತನಾಥಪುರಾಣ, ಮಲ್ಲಿನಾಥಪುರಾಣ
D) ಅನಂತನಾಥಪುರಾಣ, ಮಲ್ಲಿನಾಥಪುರಾಣ, ಲೀಲಾವತಿಪ್ರಬಂಧ,ತ್ರಿಷಷ್ಠಿಲಕ್ಷಣಮಹಾಪುರಾಣ

51. ಅನುಕ್ರಮದ ಮಾದರಿ : ಕಾಲಾನುಕ್ರಮದ ರೀತ್ಯಾ ಸಮರ್ಪಕವಾದದನ್ನು ಗುರುತಿಸಿ.

A) ಛಂದೋಂಬುಧಿ, ಛಂದಸ್ಸಾರ, ನಂದಿಛಂದೋರ್ಣವ, ಕವಿಜಿಹ್ವಾಬಂಧನ
B) ಛಂದೋಂಬುಧಿ, ಕವಿಜಿಹ್ವಾಬಂಧನ, ಛಂದಸ್ಸಾರ, ನಂದಿಛಂದೋರ್ಣವ
C) ಛಂದೋಂಬುಧಿ, ನಂದಿಛಂದೋರ್ಣವ, ಕವಿಜಿಹ್ವಾಬಂಧನ, ಛಂದಸ್ಸಾರ
D) ಕವಿಜಿಹ್ವಾಬಂಧನ, ಛಂದಸ್ಸಾರ, ನಂದಿಛಂದೋರ್ಣವ, ಛಂದೋಂಬುಧಿ

52. ರುದ್ರಭಟ್ಟನ ಕೃತಿ ಇದು.

A) ಸೋಮೇಶ್ವರ ಶತಕ
B) ಕುಸುಮಾವಳಿ
C) ಪದ್ಮರಾಜಪುರಾಣ
D) ಜಗನ್ನಾಥವಿಜಯ

53. ಸರಿಯಾದುದನ್ನು ಗುರುತಿಸಿ.

A) ಸಂಶೋಧನೆ– ಬಿ.ವ್ಹಿ.ಶಿರೂರ
B) ಸಂಶೋಧನಾಸ್ವರೂಪ– ಎಂ.ಚಿದಾನಂದಮೂರ್ತಿ
C) ಕನ್ನಡ ಸಂಶೋಧನಾಶಾಸ್ತ್ರ– ಎಂ.ಎಂ.ಕಲಬುರ್ಗಿ
D) ಸಂಶೋಧನಾ ವಿಧಾನ– ಎಲ್.ಬಸವರಾಜು

54. "ತುಂಬಿವಿಂಡಿನಂತೆ ಪಾಡಿ
ಜಕ್ಕವಕ್ಕಿಯಂತೆ ಕೂಡಿ" ಇದು ಯಾವ ಛಂದಸ್ಸಿಗೆ ಉದಾಹರಣೆ?

A) ಮಂದಾನಿಲರಗಳೆ
B) ಲಲಿತರಗಳೆ
C) ಸರಳರಗಳೆ
D) ಉತ್ಸಾಹರಗಳೆ

55. 'ತ್ರಿಪದಿ'ಯ ಪ್ರಾಚೀನ ದಾಖಲೆಗೆ ಈ ಶಾಸನ ಪ್ರಸಿದ್ಧಿಯಾಗಿದೆ.

A) ಬಾದಾಮಿಶಾಸನ
B) ಶ್ರವಣಬೆಳಗೊಳಶಾಸನ
C) ಹಲ್ಮಿಡಿಶಾಸನ
D) ಆತಕೂರುಶಾಸನ

56. "ಕನ್ನಡ ಹಸ್ತಪ್ರತಿಗಳು: ಒಂದು ಅಧ್ಯಯನ" ಇದು ಯಾರ ಸಂಶೋಧನೆ ಕೃತಿ?

A) ಟಿ.ವಿ.ವೆಂಕಟಾಚಲಶಾಸ್ತ್ರೀ
B) ಬಿ.ಕೆ.ಹಿರೇಮಠ
C) ಡಿ.ಎಲ್.ನರಸಿಂಹಾಚಾರ್
D) ಕೆ.ಜಿ.ಕುಂದಣಗಾರ

57. "ಗಣಕ್ಕೆ ಹೊರತಾಗಿ ನಿಂತು ಆ ಗಣಕ್ಕೆ ಮುಕ್ತಾಯ ಕೊಡುವ ಅಕ್ಷರಕ್ಕೆ" ಛಂದಸ್ಸಿನ ಪರಿಭಾಷೆಯಲ್ಲಿ ಏನೆಂದು ಹೇಳಲಾಗುತ್ತದೆ?

A) ಮುಡಿ
B) ಅನಾಗತ
C) ಗಣಪರಿವೃತ್ತಿ
D) ಪದ್ಮಗಣ

58. 'ಭಾರತಶಾಸ್ತ್ರ' (Indalogy)ದ ಅಧ್ಯಯನಕ್ಕೆ ನಿರ್ದಿಷ್ಟವಾದ ಶ್ರೀಕಾರ ಬರೆದ ವಿದ್ವಾಂಸ.

A) ಕರ್ನಲ್ ಮೆಕೆಂಝಿ
B) ಸರ್ ವಿಲಿಯಂ ಜೋನ್ಸ್
C) ವಾಲ್ಟರ್ ಇಲಿಯಟ್
D) ಬಿ.ಎಲ್.ರೈಸ್

59. "......ಮಿಗಿಲೀವರ್ಗಳಿನೀ ಭಾರತಂ ಲೋಕಪೂಜ್ಯಂ"– ಈ ಪ್ರಸಿದ್ಧವಾದ ಪಂಕ್ತಿ ಬರುವ ಕೃತಿ.

A) ಸಾಹಸಭೀಮವಿಜಯ
B) ಮನೋವಿಜಯಕಾವ್ಯ
C) ಬಸವರಾಜವಿಜಯ
D) ವಿಕ್ರಮಾರ್ಜುನವಿಜಯ

60. ಈ ಜೋಡಿಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗುತ್ತದೆ?

A) ನೇಮಿಚಂದ್ರ–ಗಂಗರಾಚಮಲ್ಲ
B) ನಾಗಚಂದ್ರ–ಒಂದನೆಯ ಬಲ್ಲಾಳ
C) ಕರ್ಣಪಾರ್ಯ–ಲಕ್ಷ್ಮೀಧರ
D) ಪೊನ್ನ–ಅರಿಕೇಸರಿ

61. ಇವರುಗಳಲ್ಲಿ ಬ್ರಾಹ್ಮಣ ಕವಿಗಳ ಗುಂಪಿಗೆ ಸೇರಿದವರು.

a) ಒಂದನೆಯ ನಾಗವರ್ಮ  b) ದುರ್ಗಸಿಂಹ

c) ರುದ್ರಭಟ್ಟ  d) ಎರಡನೆಯ ನಾಗವರ್ಮ

ಇವುಗಳಲ್ಲಿ ಸರಿಯಾದ ಉತ್ತರ

A) a, bಮತ್ತುc  B) a,bಮತ್ತು d

C) b, c ಮತ್ತು d  D) a, c ಮತ್ತು d

62. ಗುರುವೊಂದಾದಿಯೊಳುತ್ತಂ ಆ ಗುರು ಮೊದಲ್ಮೂರಾಗೆ......

A) ಸ್ರಗ್ಧರಾ ವೃತ್ತ  B) ಚಂಪಕಮಾಲೆ

C) ಶಾರ್ದೂಲ ವೃತ್ತ  D) ಮತ್ತೇಭವಿಕ್ರೀಡಿತ

63. "ಊಹೆ, ವೀಕ್ಷಣೆ, ಸಾಮಗ್ರಿ ಸಂಗ್ರಹ ಮತ್ತು ಪ್ರಯೋಗ ಸಂಶೋಧನೆಯ ತೇರಿನ ನಾಲ್ಕು ಚಕ್ರಗಳು..." ಎಂದು ಹೇಳಿದವರು.

A) ಆರ್.ನರಸಿಂಹಾಚಾರ್  B) ದೇಜಗೌ

C) ಎ.ವೆಂಕಟಸುಬ್ಬಯ್ಯ  D) ಫ.ಗು.ಹಳಕಟ್ಟಿ

64. 'ಮಿತ್ರವಿಂದಾಗೋವಿಂದ' ನಾಟಕದ ಕರ್ತೃ

A) ಬಸವಪ್ಪಶಾಸ್ತ್ರೀ  B) ಎಂ.ಎಲ್.ಶ್ರೀಕಂಠೇಗೌಡ

C) ಆಯತವರ್ಮ  D) ಸಿಂಗರಾರ್ಯ

65. "ಹೊಸಗನ್ನಡ ಕವಿತೆಯ ಮೇಲೆ ಇಂಗ್ಲಿಷ್ ಕಾವ್ಯದ ಪ್ರಭಾವ"– ಈ ಕೃತಿಯ ಕರ್ತೃ

A) ಶ್ರೀನಿವಾಸ ಹಾವನೂರ  B) ತ.ಸು.ಶಾಮರಾಯ

C) ರಾ.ಯ.ಧಾರವಾಡಕರ  D) ಎಸ್.ಅನಂತನಾರಾಯಣ

66. ಈಡಿಪಸ್ ಯಾವ ದೇಶದ ದೊರೆ?

A) ಅಥೆನ್ಸ್  B) ಟ್ರೋಜನ್

C) ಥೀಬ್ಸ್  D) ಟ್ರಾಯ್

67. 'ಕೆಳದಿನೃಪವಿಜಯ' ಕೃತಿಯ ಕರ್ತೃ

A) ಲಿಂಗಣ್ಣ  B) ಬಬ್ಬೂರು ರಂಗ

C) ಕಳಲೆನಂಜರಾಜ  D) ಚೆನ್ನಪ್ಪ

68. ಗಿರೀಶ್ ಕಾರ್ನಾಡರ ಯಾವ ನಾಟಕ ಮಹಾಭಾರತದಲ್ಲಿ ಬರುವ ಯವಕ್ರೀತನ ಕಥೆಯನ್ನು ಆಧರಿಸಿ ರಚಿತವಾಗಿದೆ?

A) ತಲೆದಂಡ  B) ಹಿಟ್ಟಿನಹುಂಜ

C) ಅಗ್ನಿ ಮತ್ತು ಮಳೆ  D) ಹಯವದನ

69. ಕನ್ನಡದ ಪ್ರಪ್ರಥಮ ಪತ್ರಿಕೆ 'ಮಂಗಳೂರು ಸಮಾಚಾರ' ಪತ್ರಿಕೆಯನ್ನು ಸ್ಥಾಪಿಸಿದವನು.

A) ಫಾದರ್ ಹರ್ಮನ್ ಮೊಗ್ಲಿಂಗ್ B) ಜೆ.ಎಫ್.ಕಿಟ್ಟೆಲ್

C) ಲೆಫ್ಟಿನೆಂಟ್ ಕರ್ನಲ್ ಮೆಕೆಂಜಿ D) ಜೆ.ಬೂಕರ್

70. ಕುವೆಂಪು ಅವರ 'ರಕ್ತಾಕ್ಷಿ' ನಾಟಕಕ್ಕೆ ಪ್ರೇರಣೆ–ಪ್ರಭಾವ ನೀಡಿರುವ ನಾಟಕ.

A) ಮ್ಯಾಕ್‌ಬೆತ್ B) ಕಿಂಗ್‌ಲಿಯರ್

C) ಹ್ಯಾಮ್ಲೆಟ್ D) ಒಥೆಲೋ

71. 'ಸೌಗಂಧಿಕಾ ಪರಿಣಯ' ಈ ಕೃತಿಯ ಕರ್ತೃ

A) ಚಾಮರಾಜ B) ಮುಮ್ಮಡಿ ಕೃಷ್ಣರಾಜ ಒಡೆಯರ್

C) ತಿರುಮಲಾರ್ಯ D) ದೇವಚಂದ್ರ

72. 'ಸುಧಾ' ಇದು.

A) ಮಾಸಪತ್ರಿಕೆ B) ದಿನಪತ್ರಿಕೆ

C) ತ್ರೈಮಾಸಿಕ ಪತ್ರಿಕೆ D) ವಾರಪತ್ರಿಕೆ

73. 'ಕನ್ನಡ ನಾಟಕ' ಈ ಕೃತಿಯ ಲೇಖಕರು

A) ಕೆ.ವೆಂಕಟರಾಮಪ್ಪ B) ಕೆ.ಮರುಳಸಿದ್ಧಪ್ಪ

C) ತ.ಸು.ಶಾಮರಾಯ D) ಎಚ್.ಆರ್.ರಂಗನಾಥ

74. ಕನ್ನಡ ಪತ್ರಿಕೋದ್ಯಮ ಇತಿಹಾಸದಲ್ಲಿ 'ಟ್ಯಾಬ್‌ಲಾಯ್ಡ್' ಪತ್ರಿಕೆಗಳನ್ನು ಚಾಲನೆಗೆ ತಂದ ಕೀರ್ತಿ ಇವರಿಗೆ ಸಲ್ಲುತ್ತದೆ.

A) ಪಿ.ಲಂಕೇಶ್ B) ಎಂ.ವೆಂಕಟಕೃಷ್ಣಯ್ಯ

C) ಆರ್.ಆರ್.ದಿವಾಕರ್ D) ಪಾ.ವೆಂ.ಆಚಾರ್ಯ

75. 'ಮ್ಯಾಕ್‌ಬೆತ್' ಯಾವ ದೇಶದ ಚರಿತ್ರೆಗೆ ಸಂಬಂಧಿಸಿದ ನಾಟಕ?

A) ಫಿನ್‌ಲ್ಯಾಂಡ್ B) ಐರ್ಲ್ಯಾಂಡ್

C) ಥೈಲ್ಯಾಂಡ್ D) ಸ್ಕಾಟ್‌ಲ್ಯಾಂಡ್

76. 'ಉತ್ತರರಾಮಚರಿತೆ'ಯ ಮೂಲ ಕರ್ತೃ

A) ಕಾಳಿದಾಸ B) ಭಾಸ

C) ಭಟ್ಟನಾರಾಯಣ D) ಭವಭೂತಿ

77. 'ಧ್ವನಿಯೆಂಬುದಳಂಕಾರಂ' ಈ ಮಾತು ಬರುವ ಕೃತಿ.

A) ಕಾವ್ಯಾವಲೋಕನ B) ಕವಿರಾಜಮಾರ್ಗ

C) ಧ್ವನ್ಯಾಲೋಕ D) ಶಬ್ದಮಣಿದರ್ಪಣ

78. 'ನಮ್ಮ ಸುತ್ತಿನ ಗಾದೆಗಳು'– ಈ ಕೃತಿಯ ಲೇಖಕರು

A) ಸುಧಾಕರ
B) ಪಿ.ಕೆ.ರಾಜಶೇಖರ
C) ಸಿ.ಪಿ.ಲಿಂಗಣ್ಣ
D) ರಾಗೌ

79. 'ಪ್ರತಿಭೆ'ಯನ್ನು 'ಭಾವಯತ್ರಿ' ಮತ್ತು 'ಕಾರಯತ್ರಿ ಪ್ರತಿಭೆ' ಎಂದು ಎರಡು ಬಗೆಯಾಗಿ ವಿಂಗಡಿಸಿ ವಿವರಿಸಿದ ಮೀಮಾಂಸಕರ

A) ರಾಜಶೇಖರ
B) ವಿಶ್ವನಾಥ
C) ಭಟ್ಟತೌತ
D) ಅಭಿನವಗುಪ್ತ

80. 'ಸೊಸೆಸತ್ತ ಮೇಲೆ ಅತ್ತೆಯೂ............' ಈ ಗಾದೆಗೆ ಯಾವ ಪದ ಸೇರಿದರೆ ಪೂರ್ಣವಾಗುತ್ತದೆ?

A) ಸತ್ತಳಂತೆ
B) ಅತ್ತಳಂತೆ
C) ಬೈಯ್ಯೊದು ಬಿಟ್ಟಳಂತೆ
D) ನಿದ್ದೆಗೆಟ್ಟಳಂತೆ

81. 'ಅನುಕರಣ' ತತ್ತ್ವದ ಪ್ರತಿಪಾದಕ

A) ಲಾಂಜಿನಸ್
B) ಕ್ರೋಚೆ
C) ಅರಿಸ್ಟಾಟಲ್
D) ಎಜ್ರಾಪೌಂಡ್

82. ಜನಪದ ಕಥೆಯ ಅಧ್ಯಯನದಲ್ಲಿ ಮೊತ್ತಮೊದಲಿಗೆ 'ಸೈದ್ಧಾಂತಿಕ ಧೋರಣೆ' ರೂಪಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ.

A) ಹಲಸಂಗಿ ಗೆಳೆಯರು
B) ಗ್ರಿಮ್ ಸಹೋದರರು
C) ಜಾನ್ ಫ್ರಾನ್ಸಿಸ್ ಕ್ಯಾಂಪ್‌ಬೆಲ್
D) ಸರ್ ವಾಲ್ಟರ್ ಸ್ಕಾಟ್

83. 'ರೀತಿರಾತ್ಮಾಕಾವ್ಯಸ್ಯ' ಎಂದು ಹೇಳಿದ ಮೀಮಾಂಸಕ.

A) ಕ್ಷೇಮೇಂದ್ರ
B) ಭಾಮಹ
C) ಆನಂದವರ್ಧನ
D) ವಾಮನ

84. 'ರೌದ್ರ'ರಸದ ಸ್ಥಾಯೀಭಾವ

A) ವೀರ
B) ಉತ್ಸಾಹ
C) ಕ್ರೋಧ
D) ಭಯ

85. "ದಿ ಫೋಕ್ ಸಾಂಗ್ಸ್ ಆಫ್ ಸದರ್ನ್ ಇಂಡಿಯಾ" ಕೃತಿಯ ಲೇಖಕರು

A) ಅಲೆಗ್ಸಾಂಡರ್ ಕ್ರಾಪ್ಪ್
B) ಸಿ.ಎಂ.ಬೌರಾ
C) ಮೇರಿ ಕ್ಲಾರ್ಕ್
D) ಚಾರ್ಲ್ಸ್ ಇ.ಗೋವರ್

86. 'ಕಾವ್ಯಾಲಂಕಾರಸಾರಸಂಗ್ರಹ' ಇದು ಯಾರ ಕೃತಿ?

A) ಉದ್ಭಟ
B) ಧನಂಜಯ
C) ರುದ್ರಟ
D) ಧನಿಕ

87. ಇವುಗಳಲ್ಲಿ ಸರಿಯಾದುದನ್ನು ಗುರುತಿಸಿ.

A) ರಸ ರತ್ನಾಕರ–ತಿರುಮಲಾರ್ಯ
B) ರಸಗಂಗಾಧರ–ವಿಶ್ವನಾಥ
C) ವಕ್ರೋಕ್ತಿಜೀವಿತ–ಕುಂತಕ
D) ಕಾವ್ಯಪ್ರಕಾಶ–ಲೊಲ್ಲಟ

88. 'ಬಿಳಿ ಸಿಪಾಯಿಗೆ ಕರಿಟೋಪಿ' ಈ ಒಗಟಿನ ಅರ್ಥವೇನು?

A) ಕಣ್ಣು
B) ಬೆಂಕಿಕಡ್ಡಿ
C) ಮೇಣದ ಬತ್ತಿ
D) ಬೆಂಕಿಕೆಂಡ

89. ಇವುಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗುವುದಿಲ್ಲ?

A) Literaria Biographia- ಕೋಲ್‌ರಿಡ್ಜ್
B) Principals of literary criticism- ಐ.ಎ.ರಿಚರ್ಡ್ಸ್
C) Intuition-Expression- ಕ್ರೋಚೆ
D) Tradition and Individual Talent- ಷೆಲ್ಲಿ

90. 'ತುಳು ಗಾದೆಗಳು' ಕೃತಿ ಕರ್ತೃ

A) ಬಿ.ಎ.ವಿವೇಕರೈ
B) ಎಂ.ಎಸ್.ಸುಂಕಾಪುರ
C) ಎ.ಎಸ್.ಹೂಗಾರ
D) ಎಲ್.ಆರ್.ಹೆಗಡೆ

91. "ಕಾವ್ಯಶೋಭಾಕರಾನ್ ಧರ್ಮಾನ್ ಅಲಂಕಾರಾನ್ ಪ್ರಚಕ್ಷತೇ....." ಎಂದು ಹೇಳಿರುವ ಆಲಂಕಾರಿಕ.

A) ಭಾಮಹ
B) ದಂಡಿ
C) ರುಯ್ಯಕ
D) ಅಭಿನವಗುಪ್ತ

92. 'ತಿರುಕೊಳವಿನಾಚಿಯ ಪ್ರಸಂಗ' ಬರುವ ಕೃತಿ.

A) ರಾಜಶೇಖರ ವಿಳಾಸ
B) ಶಬರಶಂಕರ ವಿಳಾಸ
C) ಸಾನಂದಚರಿತ್ರೆ
D) ರಾಜಾವಳೀ ಕಥೆ

93. 'The Folktale' ಇದು ಯಾರ ಕೃತಿ?

A) ಸ್ಟಿತ್ ಥಾಂಸನ್
B) ವಾನ್‌ದೇರ್ ಲೆಯನ್
C) ಮಿಲ್ಲರ್
D) ವುಂಟ್

94. ಇವುಗಳಲ್ಲಿ ಯಾವ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ?

A) ತೌಲನಿಕ ಕಾವ್ಯಮೀಮಾಂಸೆ
B) ಪಾಶ್ಚಾತ್ಯ ಕಾವ್ಯಮೀಮಾಂಸೆ
C) ಕಾವ್ಯಾರ್ಥ ಚಿಂತನ
D) ಭಾರತೀಯ ಕಾವ್ಯಮೀಮಾಂಸೆ

95. ಗಾದೆಗಳ ಸ್ವರೂಪ ಲಕ್ಷಣಗಳ ಬಗ್ಗೆ ವಿಶೇಷ ಅಧ್ಯಯನ ನಡೆಸಿದವರು

A) ಜೆ.ಎ.ಕೆಲ್ಲೊ
B) ಹಡ್ಸನ್
C) ರ್‍ಯಾಂಕೆ
D) ಎಡ್ವರ್ಡ್ ಘೀಟರ್ ರೈಸ್

96. ನಿಜಸುಖಾದಿವಿವಶೀಭಾವ' ಎಂಬುದು ಇದರ ಪರಿಭಾಷೆ

A) ಧ್ವನಿ B) ಔಚಿತ್ಯ
C) ಅಲಂಕಾರ D) ಸಪ್ತ ವಿಘ್ನಗಳು

97. 'ರಸೋವೈಸಃ' ಇದು ಯಾರ ಕೃತಿ?

A) ಡಿ.ಬಿ.ಇನಾಂದಾರ್ B) ಎಚ್.ತಿಪ್ಪೇರುದ್ರಸ್ವಾಮಿ
C) ಕುವೆಂಪು D) ತೀ.ನಂ.ಶ್ರೀ.

98. 'ಪ.ಬ.ಮ' ಧ್ವನಿಗಳನ್ನು ಹೀಗೆ ವರ್ಗೀಕರಿಸುತ್ತಾರೆ.

A) ಕಂಠ್ಯ B) ಮೂರ್ಧನ್ಯ
C) ದಂತ್ಯ D) ಓಷ್ಠ್ಯ

99. 'ಕನ್ನಡಕ್ಕೆ ಬೇಕು ಕನ್ನಡದ್ದೇ ವ್ಯಾಕರಣ' ಗ್ರಂಥದ ಕರ್ತೃ

A) ಎನ್.ಎಸ್.ಲಕ್ಷ್ಮೀನಾರಾಯಣಭಟ್ಟ B) ಡಿ.ಎನ್.ಶಂಕರಭಟ್ಟ
C) ಫ.ಸು.ಭಟ್ಟ D) ವಿ.ಜಿ.ಭಟ್ಟ

100. 'ಮಗು' ಇದು ಯಾವ ಲಿಂಗ?

A) ಪುಲ್ಲಿಂಗ B) ನಪುಂಸಕಲಿಂಗ
C) ಸ್ತ್ರೀಲಿಂಗ D) ಪುಂಪುಲ್ಲಿಂಗ

101. "ದ್ರಾವಿಡ ಭಾಷೆಗಳು ಸ್ವತಂತ್ರಭಾಷೆಗಳೇ ಹೊರತು ಸಂಸ್ಕೃತ ಜನ್ಯ ಭಾಷೆಗಳಲ್ಲ" ಎಂದು ಮೊತ್ತಮೊದಲು ಪ್ರತಿಪಾದಿಸಿದ ವಿದ್ವಾಂಸ

A) ಫ್ರಾನ್ಸಿಸ್ ವೈಟ್ ಎಲ್ಲೀಸ್ B) ಎಂ.ಬಿ.ಎಮಿನೋ
C) ಟಿ.ಬರೋ D) ಎಸ್.ಕೆ.ಚಟರ್ಜಿ

102. 'ಖೇದಕ್ಕೆ' ಕೇಶಿರಾಜ ಕೊಟ್ಟಿರುವ ಉದಾಹರಣೆ ಇದು.

A) ಹಾ ರಾಮಾ ಎಂದು ಸೀತೆ ಬಾಯಟೆದಟ್ಟಿಳ್ B) ಗುಣಕ್ಕೆ ನಲ್ಲ ಗಣೇಶ
C) ಅಯ್ಯೋ ಅಕ್ಕಟಾ ಇಂದ್ರಂಗೆ ಕೇಡಾಯ್ತೆ D) ಕಪಿಗೆ ಚಪಲತೆ ಸಹಜಂ

103. 'ಲಿಂಗ್ವಿಸ್ಟಿಕ್ ಸರ್ವೆ ಆಫ್ ಇಂಡಿಯಾ' ಕೃತಿಯ ಲೇಖಕರು

A) ಹೆನ್ರಿ ಹೇಗ್ B) ಜೆ.ಸ್ಟೀವನ್ಸನ್
C) ಕಾಲಿನ್ ಕ್ಯಾಂಬೆಲ್ D) ಜಿ.ಎ.ಗ್ರಿಯರ್‌ಸನ್

104. ಭಟ್ಟಾಕಳಂಕನ 'ಶಬ್ದಾನುಶಾಸನ' ಈ ಭಾಷೆಯಲ್ಲಿ ರಚಿತವಾಗಿರುವ ವ್ಯಾಕರಣ ಗ್ರಂಥ.

A) ಹಳಗನ್ನಡ B) ಸಂಸ್ಕೃತ
C) ಪ್ರಾಕೃತ D) ತೆಲುಗು

105. 'ಅಮ್' ಇದು ಯಾವ ವಿಭಕ್ತಿ ಪ್ರತ್ಯಯ?

A) ಷಷ್ಠಿ ವಿಭಕ್ತಿ
B) ತೃತೀಯ ವಿಭಕ್ತಿ
C) ದ್ವಿತೀಯ ವಿಭಕ್ತಿ
D) ಸಪ್ತಮಿ ವಿಭಕ್ತಿ

106. ಇವು ಕನ್ನಡದಲ್ಲಿರುವ ಅನ್ಯದೇಶಿ ಪದಗಳು

a) ತಿಂಗಳು
b) ಅನಾನಸು
c) ರೈತ
d) ಅರ್ಜಿ

ಇವುಗಳಲ್ಲಿ ಸರಿಯಾದ ಉತ್ತರ

A) b, cಮತ್ತುd
B) a,bಮತ್ತು c
C) a, c ಮತ್ತು d
D) a ಮತ್ತು d

107. 'ಹೊಟ್ಟೆ ಮೇಲೆ ಒದ್ದೆ ಬಟ್ಟೆ ಹಾಕಿಕೊ' ಈ ನುಡಿಗಟ್ಟಿನ ಅರ್ಥವೇನು?

A) ಜೀವನ ಸಾಗಿಸು
B) ಬದುಕಿಗೆ ವಿಘ್ನತರು
C) ತಿನ್ನಲು ಏನೂ ಇಲ್ಲದಿರು
D) ಜೀವನ ಮಾರ್ಗವನ್ನು ಕೆಡಿಸು

108. ಇವು 'ಪ್ರಕಾರ ವಾಚಕ'ಗಳು

A) ಅಷ್ಟು ಇಷ್ಟು ಎಷ್ಟು
B) ಅಂಥ ಇಂಥ ಎಂಥ
C) ಬಿಳಿ ಕರಿ ಕೆಂಪು
D) ಸಣ್ಣ ದಪ್ಪ ಎತ್ತರ

109. ಇಪ್ಪತ್ತೈದು ಜನಪದ ಕಥೆಗಳ ಸಂಕಲನದ ಕೃತಿ ಇದು.

A) ಓಲ್ಡ್ ಡೆಕ್ಕನ್ ಡೇಸ್
B) ಓಲ್ಡ್ ಕೆನರೀಸ್ ಲಿಟರೇಚರ್
C) ಪ್ರಾಕ್ಟಿಕಲ್ ಕೀ ಟು ಕನ್ನಡ ಲ್ಯಾಂಗ್ವೇಜ್
D) ಎ ಹಿಸ್ಟರಿ ಆಫ್ ಕೆನರೀಸ್ ಲಿಟರೇಚರ್

110. 'ಕುಯಿ, ಕುವಿ, ಗೋಂಡಿ' ಇವು

A) ಉತ್ತರ ದ್ರಾವಿಡ ಭಾಷೆ
B) ಮೂಲ ದ್ರಾವಿಡ ಭಾಷೆ
C) ದಕ್ಷಿಣ ದ್ರಾವಿಡ ಭಾಷೆ
D) ಮಧ್ಯದ್ರಾವಿಡ ಭಾಷೆ

111. ವ್ಯಕ್ತಿ, ವಸ್ತು ಮತ್ತು ಪ್ರಾಣಿಗಳ ಗುಣವಿಶೇಷತೆಗಳನ್ನು ಸೂಚಿಸುವ ಶಬ್ದಗಳಿಗೆ ಸಾಮಾನ್ಯವಾಗಿ ಎಂದು ಕರೆಯುತ್ತಾರೆ.

A) ಗುಣವಾಚಕಗಳು
B) ಸರ್ವನಾಮಗಳು
C) ಸಂಖ್ಯಾವಾಚಕಗಳು
D) ವಿಭಕ್ತಿ ಪ್ರತ್ಯಯಗಳು

112. 'ಕಡುಚಾಗಿ' ಇದು ಯಾವ ಸಮಾಸ?

A) ಅಂಶಿಸಮಾಸ
B) ಕ್ರಿಯಾಸಮಾಸ
C) ಬಹುವ್ರೀಹಿಸಮಾಸ
D) ಗಮಕ ಸಮಾಸ

113. ನಾಮಪದದ ಮೂಲ ರೂಪಕ್ಕೆ ______ ಎನ್ನುವರು.

A) ಧಾತು
B) ಪ್ರಕೃತಿ
C) ಪ್ರತ್ಯಯ
D) ಅವ್ಯಯ

114. 'ಭಿಕ್ಷಾ' ಪದದ ತದ್ಭವ ರೂಪ

A) ಬಿಕ್ಕು
B) ಭಿಕ್ಷೆ
C) ಬಿಕ್ಕಿ
D) ಬಿಕ್ಕೆ

115. 'ಹಣವಂತ' ಇದು.

A) ಕೃದಂತ
B) ಕ್ರಿಯಾಪದ
C) ತದ್ಧಿತಾಂತ
D) ಗುಣವಾಚಕ

116. 'ದ್ರಾವಿಡ ಭಾಷಾವಿಜ್ಞಾನ' ಕೃತಿಯ ಲೇಖಕರು.

A) ಜಿ.ವೆಂಕಟಸುಬ್ಬಯ್ಯ
B) ಆರ್.ನರಸಿಂಹಾಚಾರ್
C) ಸಂಗಮೇಶ ಸವದತ್ತಿಮಠ
D) ಹಂಪನಾಗರಾಜಯ್ಯ

117. "A Comparitive grammar of Dravidian Languages" – ಈ ಕೃತಿಯ ಕರ್ತೃ

A) ಫಾದರ್ ಹೆರಸ್
B) ಕಾಲ್ಡ್‌ವೆಲ್
C) ಎಂ.ಬಿ.ಎಮಿನೋ
D) ಟಿ.ಬರೋ

118. 'ಆಧುನಿಕ ಕಂಪ್ಯೂಟರಿನ ಮೂಲ ಶಿಕ್ಷಣ'– ಈ ಕೃತಿಯ ಕರ್ತೃ

A) ಸುಧಾಮೂರ್ತಿ
B) ಚಿದಾನಂದಗೌಡ
C) ಆರ್.ಶ್ರೀಧರ
D) ನಾರಾಯಣಮೂರ್ತಿ

119. 'ಲಿಂಗಗಳೊಂಬತ್ತು ತೆಱಂ' ಎಂದು ಹೇಳಿರುವ ವೈಯ್ಯಾಕರಣಿ.

A) ಭಟ್ಟಾಕಳಂಕ
B) ಕೇಶಿರಾಜ
C) ಮೂರನೆಯ ನಾಗವರ್ಮ
D) ಕೃಷ್ಣಮಾಚಾರ್ಯ

120. 'ಸಾಮಜ' ಎಂದರೆ

A) ಕುದುರೆ
B) ಒಂಟೆ
C) ಸಿಂಹ
D) ಆನೆ

************